42	Yelagod	do
43	Bagalur	do
44	Gabsavalgi	do
45	Guttargi	do
46	Mortagi	do
47	Somjal	do

ಶ್ರೀ ಎಂ. ಎಚ್. ಬೆಕಿನಾಲ್ಕರ್. —ತಾವು ಈ ಪ್ರಶ್ನೆಯ (ಅ)ಗೆ ಉತ್ತರವಾಗಿ ೪೭ ಡಿಫಾಲ್ಟರ್ ಸೊಸೈಟಿಗಳ ಹೆಸರುಗಳನ್ನೂ ಸಹ ಇಲ್ಲಿ ಕೊಟ್ಟಿದ್ದೀರಿ. ಈ ಲಿಸ್ಟಿನ ಸೀರಿಯಲ್ ನಂಬರ್ ೫ ಕನ್ನೋಳಿ ಮತ್ತು ಸೀರಿಯಲ್ ನಂಬರ್ ೧೫ ಕೋರಳ್ಳಿ ಸೊಸೈಟಿ ಏನು ಇದೆ ಇವು ಒಬ್ಬನೇ ವ್ಯಕ್ತಿ ಬೇರೆ ಬೇರೆ ಯವರ ಹೆಸರಿನಲ್ಲಿ ೩–೩ ಲಕ್ಷ ರೂಪಾಯಿ ಸಾಲ ತೆಗೆದುಕೊಂಡಿದ್ದಾನೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಆ ವಿಷಯ ಸರ್ಕಾರದ ಗಮನಕ್ಕೆ ಬಂದಿಲ್ಲಾ. ನಿರ್ದಿಷ್ಟ ಪ್ರಕರಣವನ್ನು ನನ್ನ ಗಮನಕ್ಕೆ ತಂದರೆ ಸೂಕ್ತವಾದ ಕಾರ್ಯಕ್ರಮ ಕೈಗೊಳ್ಳುತ್ತೇನೆ.

ಶ್ರೀ ಎಂ. ಎಚ್. ಬೆಕಿನಾಲ್ಕರ್.—ಈ ಪ್ರಶ್ನೆಯ (ಇ)ಗೆ ಉತ್ತರವಾಗಿ ಹೌದು ಎಂದು ಹೇಳಿದ್ದೀರಿ. ಇದನ್ನು ಈಗ ಯಾವುದಾದರೂ ಹೊಸ ಏಜೆನ್ಸಿಗೆ ವಹಿಸಲಾಗಿದೆಯೇ ? ಅಥವಾ ಏನಾದರೂ ಬೇರೆ ಬೇರೆ ಏಜೆನ್ಸಿಗಳಿಗೆ ಇವರಿಗೆ ಸಾಲ ಕೊಡುವುದನ್ನು ವಹಿಸಿದ್ದರೆ ಆ ಏಜೆನ್ಸಿ ಯಾವುದು ಅನ್ನುವುದನ್ನು ಹೇಳುತ್ತೀರಾ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ —ಅವರು ಯಾವ ಯಾವ ಸಹಕಾರ ಸಂಘಗಳಲ್ಲಿ ಸದಸ್ಯರಾಗಿ ಹಣವನ್ನು ತೆಗೆದುಕೊಂಡಿರುತ್ತಾರೆ, ತೆಗೆದುಕೊಂಡಿರತಕ್ಕಂಥಾ ಸಾಲವನ್ನು ಆ ಏಜೆನ್ಸಿಗೆ ವಾಪಸ್ಸು ಮಾಡಿದ್ದರೆ ಅವರು ಡಿಫಾಲ್ಟರ್ ಆಗದೇ ಹೋಗಿದ್ದರೆ ಅದೇ ಏಜನ್ಸಿಯವರೇ ಮತ್ತೆ ಅವರಿಗೆ ಸಾಲ ಕೊಡುತ್ತಾರೆ. ಒಂದು ವೇಳೆ ಅವರು ಡಿಫಾಲ್ಟರ್ ಆಗಿದ್ದರೆ ಅಂಥಾವರಿಗೆ ಮತ್ತೆ ಸಾಲ ಕೊಡುವುದಿಲ್ಲ. ಹೊಸ ಏಜೆನ್ಸಿ ಏನು ಬೇರೆ ಮಾಡಿಲ್ಲಾ, ಅದೇ ಏಜೆನ್ಸಿಯವರೇ ಆ ಸದಸ್ಯರು ಡಿಫಾಲ್ಟರ್ ಆಗದೇ ಹೋಗಿದ್ದರೆ ಮತ್ತೆ ಸಾಲ ಕೊಡುತ್ತಾರೆ.

ಶ್ರೀ ಪಾಟೀಲ್.—ಸ್ವಾಮಿ ಈ ರೈತರಿಗೆ ಸಾಲ ಮನ್ನಾ ಮಾಡುವುದರ ಬಗ್ಗೆ ಈಗ ೩೦–೬–೮೨ ಎಂದು ಏನು ಒಂದು ದಿನಾಂಕವನ್ನು ಗೊತ್ತು ಮಾಡಿದ್ದೀರೋ ಅದನ್ನು ಇನ್ನೂ ಸ್ವಲ್ಪ ಎಕ್ಸ್‌ಟೆಂಡ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಪರಿಶೀಲಿಸುತ್ತೇನೆ;

Grants to Karnataka State Sports Council

64 SRI P. RAMDEV (Malleswaram).—Will the Minister of State for Information and Youth Services be pleased to state :—

(a) the number of applications seeking grant received by the Youth Services Department and Karnataka State Sports Council during the period 1978–81 ;

(b) out of them, the number of applications received from Associations and Co-operative institutions ; the number of applications received from individuals ; and the amount of grant asked for by them ;

(c) out of them the Societies, Institutions and the persons to whom the amount has been granted and the purpose for which it has been granted ·

(d) the reasons adduced and the names of Associations, Co-operative Institution and the individuals among the rejected applications ?

SRI K. GANGADHAR (Minister of State for Information and Youth Services).—

(a) The applications received seeking grant during the period from 1978-79 to 1980-81 are as follows :—

1978-79	112	applications
1979-80	216	do
1980-81	252	do

(b) **During 1978-79 :** From Associations & Co-operative Institutions 111 applications
From individuals 1 application

During 1979-80

From Associations & Co-operative Institutions 205 applications
From individuals 11 do

During 1980-81

From Associations & Co-operative Institutions : 251 applications
From individuals 1 application

Total amount of grant asked for by them :

1978-79	1,22,145.00
1979-80	7,83,923.00
1980-81	34,19,042.32

(c) Separate report containing full information about this is placed on the Table of the House.*

(d) Separate report about this is placed on the Table of the House.*

* 26 dated 21-6-1982

ಶ್ರೀ ಪಿ. ರಾಮದೇವ್.—ಪ್ರಶ್ನೆಗೆ ಉತ್ತರವಾಗಿ ಒದಗಿಸಿರತಕ್ಕ ಪಟ್ಟಿಯಲ್ಲಿ ೧೯೭೯–೮೦ರಲ್ಲಿ ಇಸ್ಪೀಟು ಆಟಗಾರರ ಸಂಘಕ್ಕೆ, ಅವರು, ೧,೮೦,೦೦೦ ರೂಪಾಯಿಗಳನ್ನು ಕೇಳಿದಾಗ್ಯೂ ಅವರಿಗೆ ಬೇಸಿಗೆ ಶಿಬಿರವನ್ನು ನಡೆಸುವುದಕ್ಕೆ ಐದು ಸಾವಿರ ರೂಪಾಯಿಗಳನ್ನು ಕೊಡಲಾಗಿದೆ ೧೯೮೦–೮೧ರಲ್ಲಿ ಇವರಿಗೆ ಎಂಟು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೀರಿ. ಈ ಇಸ್ಪೀಟು ಆಟವನ್ನು ಯಾವ ಕ್ರೀಡೆಗಳಲ್ಲಿ ಸೇರಿಸಿಕೊಂಡು ಈ ಹಣವನ್ನು ಕೊಟ್ಟಿದ್ದೀರಿ, ಈ ಇಸ್ಪೀಟು ಆಟ ಯಾವ ಕ್ರೀಡೆಯಲ್ಲಿಯೂ ಸೇರಿಲ್ಲ, ಹೇಗೆ ಇವರಿಗೆ ಹಣವನ್ನು ಕೊಡಲಾಗಿದೆ ?

ಶ್ರೀ ಕೆ. ಗಂಗಾಧರ. ಇಸ್ಪೀಟು ಆಟಗಾರರೂ ಒಂದು ಸಂಘ ಎಂದು ಮಾಡಿ ಕೊಂಡು ನಮಗೆ ಹಣವನ್ನು ಕೊಡಿ ಎಂದು ಕೇಳಿದ್ದಾರೆ. ಈ ಸಂಘಕ್ಕೆಂದು ನಾವು ಸರ್ಕಾರದಿಂದ ಹಣ ಕೊಟ್ಟಿದ್ದೇವೆ.

ಶ್ರೀ ಪಿ. ರಾಮದೇವ್.—ನವರಿಗೆ ಒದಗಿಸಿರತಕ್ಕ ಪಟ್ಟಿಯಲ್ಲಿ ಒಂದೊಂದು ಸಂಘಕ್ಕೂ ಒಂದೊಂದು ರೀತಿಯ ಹಣವನ್ನು ಕೊಡಲಾಗಿದೆ. ಕೆಲವರಿಗೆ ತರಬೇತಿ ಶಿಬಿರವನ್ನು ನಡೆಸಲಿಕ್ಕೆ, ಇನ್ನೂ ಕೆಲವರಿಗೆ ವಿವಿಧ ರೀತಿಯ ಸ್ಪರ್ಧೆಗಳನ್ನು ನಡೆಸಲಿಕ್ಕೆ ಕೊಡಲಾಗಿದೆ. ಈ ರೀತಿ ಹಣವನ್ನು ಕೊಡುವಾಗ ತಾವು ಯಾವುದಾದರೂ ಒಂದು ಸೂತ್ರವನ್ನು ಅನುಸರಿಸಿ ಕೊಡುತ್ತೀರೋ ಅಥವಾ ಹೇಗೆ ಕೊಡುತ್ತೀರಿ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಕೆ. ಗಂಗಾಧರ್.—ಇಷ್ಟರವರೆಗೆ ನಾವು ಇದರ ಬಗ್ಗೆ ಯಾವ ಸೂತ್ರವನ್ನೂ ನಾವು ಅನುಸರಿಸಿ ಕೊಡುತ್ತಿಲ್ಲ. ಒಂದೊಂದು ಅಸೋಸಿಯೇಷನ್‌ನವರು ವಿವಿಧ ರೀತಿಯ ಕಾರ್ಯಕ್ರಮಗಳನ್ನು ಹಾಕಿ ಕೊಂಡು ಸರ್ಕಾರದಿಂದ ಸಹಾಯವನ್ನು ಕೇಳುತ್ತಾರೆ. ಒಂದೊಂದು ಸಾರಿ ಸಂದರ್ಭವನ್ನು ನೋಡಿ ಕೊಂಡು ಸಹಾಯ ಧನವನ್ನು ಕೊಡುತ್ತೇವೆ. ಕೆಲವೊಂದು ಸಂದರ್ಭದಲ್ಲಿ ಹಣವನ್ನು ಕೊಡುವುದ ಕ್ಕಾಗುವುದಿಲ್ಲ. ಇನ್ನು ಮುಂದೆ ನಾವು ಯಾವುದಾದರೊಂದು ಕ್ರೈಟೀರಿಯಾವನ್ನು ಇಟ್ಟುಕೊಂಡು ಸಂಘ ಸಂಸ್ಥೆಗಳಿಗೆ ಹಣವನ್ನು ಕೊಡುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಡಿ. ಟಿ. ರಾಮು. —ಇಸ್ಪೀಟು ಆಟ ಯಾವ ಕ್ರೀಡೆ ಎಂದು ನಿರ್ಧಾರ ಮಾಡಿದ್ದೀರಿ ? ಇದು ಯಾವ ಸ್ಪರ್ಧೆಯಲ್ಲಿ ಬರುತ್ತದೆ ?

ಶ್ರೀ ಕೆ ಗಂಗಾಧರ್.—ಇದಕ್ಕೆ ಮಾನ್ಯ ಸದಸ್ಯರು ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ ಉತ್ತರ ವನ್ನು ಒದಗಿಸುತ್ತೇವೆ.

ಶ್ರೀ ಜೀವರಾಜ ಆಳ್ವ.—ನಮ್ಮ ರಾಜ್ಯದಲ್ಲಿ ಅನೇಕ ಜನರು ಸಂಘ ಸಂಸ್ಥೆಗಳನ್ನು ಮಾಡಿಕೊಂಡು ತಪ್ಪು ಕೌಟುಂಬಿಕ ವ್ಯವಹಾರ ನಡೆಸಿದಂತೆ ಆವುಗಳನ್ನು ನಡೆಸುತ್ತಿದ್ದಾರೆ ಈ ಬಗ್ಗೆ ಸರ್ಕಾರದವರು ಸರಿಯಾಗಿ ವಿಚಾರ ಮಾಡುವುದಕ್ಕೆ ಒಂದು ವಿಚಾರಣಾಸಮಿತಿಯನ್ನು ನೇಮಕ ಮಾಡುವುದಕ್ಕೆ ಪ್ರಯತ್ನ ಮಾಡುವರೇ ?

ಶ್ರೀ ಕೆ. ಗಂಗಾಧರ್.—ಇಂಥ ವಿಷಯವನ್ನು ಮಾನ್ಯ ಸದಸ್ಯರು ಈಗತಾನೆ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಇದರ ಬಗ್ಗೆ ವಿಚಾರ ಮಾಡೋಣ.

ಶ್ರೀ ಪಿ. ರಾಮದೇವ್.—ತಾವು ಒದಗಿಸಿರತಕ್ಕ ಪಟ್ಟಿಯಲ್ಲಿ ಫುಟ್ ಬಾಲ್ ಅಸೋಸಿಯೇಷನ್‌ಗೆ ಅವರು ಐದು ಲಕ್ಷ ರೂಪಾಯಿಗಳನ್ನು ಕೇಳಿದ್ದರೂ ಸಹ ಒಂದು ಲಕ್ಷ ರೂಪಾಯಿಗಳನ್ನು ಸ್ಟೇಡಿಯಂ ಕಟ್ಟುವುದಕ್ಕೆ ಕೊಟ್ಟಿದ್ದಾರೆ ಬೇರೆಯವರು ಎಷ್ಟು ಹಣ ಕೇಳಿದ್ದರೂ ಸಹ ಅಷ್ಟು ಕೊಟ್ಟಿದ್ದೀರಿ. ಈ ವ್ಯತ್ಯಾಸ ಹೇಗೆ ? ಫುಟ್ ಬಾಲ್ ಅಸೋಸಿಯೇಷನ್ ಅಂತರ ರಾಷ್ಟ್ರೀಯ ಸಂಸ್ಥೆ. ಇವರಿಗೆ ಸ್ಟೇಡಿಯಂ ಪೂರ್ತಿಮಾಡಲಿಕ್ಕೆ ಹಣವನ್ನು ಕೊಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ಗಂಗಾಧರ್.—ಈ ತಿಂಗಳ ೨೬ರಂದು ಸ್ಪೇಟ್ ಹೈಲೆವೆಲ್ ಮೀಟಿಂಗನ್ನು ಕರೆದಿದ್ದೇವೆ ಇದರಲ್ಲಿ ಈ ಸಂಸ್ಥೆಗೆ ಹಣವನ್ನುಕೊಡುವ ನಿರ್ಧಾರ ಮಾಡುವ ವಿಷಯವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಪಿ. ರಾಮದೇವ್,—ಒಲಂಪಿಕ್ ಅಸೋಸಿಯೇಷನ್ ೧೯೭೯–೮೦ರಲ್ಲಿ ಹಾಜರಾಗಲು ೮ ಸಾವಿರ ರೂಪಾಯಿಗಳನ್ನು ೧೯೮೦–೮೧ರಲ್ಲಿ ೬ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೀರಿ ಬೇರೆ ಅಸೋಸಿಯೇಷನ್‌ನವರು ಈ ರೀತಿಯಲ್ಲಿ ಹಣವನ್ನು ಕೇಳಿದಾಗ ಕೊಟ್ಟಿಲ್ಲ. ಆಲ್ ಇಂಡಿಯಾ ಲೆವೆಲ್ ನಲ್ಲಿ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಬೇರೆ ಬೇರೆ ರೀತಿಯಲ್ಲಿ ಹಣವನ್ನು ಕೊಡುತ್ತಾರೆ ತಾವೂ ಸಹ ಉಳಿದ ಸಂಸ್ಥೆಗಳಿಗೆ ಇಂಥ ಸಂದರ್ಭದಲ್ಲಿ ಹಣವನ್ನು ಕೊಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ಗಂಗಾಧರ್.—ಮಾನ್ಯ ಸದಸ್ಯರ ಸಲಹೆಯನ್ನು ವಿಚಾರ ಮಾಡುತ್ತೇನೆ.

ಶ್ರೀ ಜಿ. ಕೆ. ತಕ್ಕೇಡ್.—ಇಸ್ಪೀಟ್ ಆಟಗಾರರ ಸಂಘಕ್ಕೆ ತಾವು ಮನ್ನಣೆಕೊಟ್ಟು ಹಣವನ್ನು ಕೊಟ್ಟಿದ್ದೀರಿ, ಅಲ್ಲಿ ಕೆಲವು ಕಾನೂನು ಬಾಹಿರವಾದಂಥ ಚಟುವಟಿಕೆಗಳು ನಡೆಯುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಗಂಗಾಧರ್.—ಅಂಥಾದ್ದು ನಮ್ಮ ಗಮನಕ್ಕೆ ಬಂದಿಲ್ಲ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.

Questions for Answers on the day (but not taken up)

NRW Works Sanctioned in Chickmagalur Taluk

134 SRI MARGADA MALLAPPA (Birur)—Will the Minister for Rural Development and Panchayat Raj be pleased to state :

(a) number of NRW Works sanctioned for the year 1980-81 in Chickmagalur Taluk ;

(b) the names of the works which are in progress and the amount sanctioned for each of the works ;

(c) whether it has come to the notice of the Government that due to the policy of centralisation, the progress of works is stand still ?

SRI B RAMAIAH (Minister for Rural Development and Panchayat Raj).—

(a) Only one NRWS Scheme was sanctioned to Chickmagalur Taluk for the year 1980-81.

(b) There are Thirteen works under progress in Chickmagalur Taluk ; out of which 10 under State Sector and 3 under Central Sector.

detailed list are placed on the Table of House.*

(c) No.

Construction of Medium Irrigation Project in Karwar Dist.

911 SRI F. S. PATIL (Kalghatgi) - Will the Minister of State for Major and Medium Irrigation be pleased to state :—

(a) whether it has come to the notice of Government that there is a proposal to construct a Medium Irrigation Project near Alaveri Village in Mundgod taluk. Karwar District ;

---

† Lib. No. 24, dated 21-6-1982